## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಸಾಲ ಮರುಪಾವತಿ (Loan Recovery amount) ಹಣದಿಂದ NMDFC ಮಾದರಿಯಲ್ಲಿ ವಿದೇಶದಲ್ಲಿ ವ್ಯಾಸಂಗ ಮಾಡಲು ಸಾಲ ಯೋಜನೆ ಅನುಷ್ಠಾನಗೊಳಿಸುವ ಬಗ್ಗೆ ಆದೇಶವನ್ನು ಮಾರ್ಪಡಿಸುವ ಕುರಿತು.

ಓದಲಾಗಿದೆ: ಸರ್ಕಾರಿ ಆದೇಶ ಸಂಖ್ಯೆ:MWD 51 MDC 2022, ಬೆಂಗಳೂರು, ದಿನಾಂಕ:05-07-2022.

*****

ಪ್ರಸ್ತಾವನೆ:

ಮೇಲೆ ಓದಲಾದ ಸರ್ಕಾರದ ಆದೇಶ ದಿನಾಂಕ:05.07.2022 ರಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಸಾಲ ಮರುಪಾವತಿ (Loan Recovery amount) ಹಣದಿಂದ NMDFC ಮಾದರಿಯಲ್ಲಿ ವಿದೇಶದಲ್ಲಿ ವ್ಯಾಸಂಗ ಮಾಡಲು ಬಯಸುವ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳಿಗೆ ವ್ಯಾಸಂಗ ಸಾಲ ಯೋಜನೆಯನ್ನು NMDFC ಮಾದರಿಯಲ್ಲಿ 2022-23ನೇ ಸಾಲಿಗೆ ಸಾಲ ಮರುಪಾವತಿಯಿಂದ ಲಭ್ಯವಾಗುವ ರೂ.10.00 ಕೋಟಿಗಳ ಮೊತ್ತದಲ್ಲಿ ಅನುಷ್ಠಾನಗೊಳಿಸಲು ಹಲವು ಷರತ್ತಿಗೊಳಪಟ್ಟು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಲಾಗಿತ್ತು.

ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿ ವಿದೇಶದಲ್ಲಿ ಉನ್ನತ ವ್ಯಾಸಂಗಕ್ಕಾಗಿ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಯೋಜನೆಯು ಜಾರಿಯಲ್ಲಿದ್ದು, ಸದರಿ ಯೋಜನೆಯಡಿಯಲ್ಲಿ ಆಯ್ಕೆಗೊಂಡ ವಿದ್ಯಾರ್ಥಿಗಳಿಗೆ ಅಲ್ಪಸಂಖ್ಯಾತರ ನಿರ್ದೇಶನಾಲಯವು ನೀಡುವ ವಿದ್ಯಾರ್ಥಿವೇತನದ ಮಿತಿಗಿಂತ ಹೆಚ್ಚಿನ ಶುಲ್ಕ ಭರಿಸುವ ಅವಶ್ಯಕತೆಯಿರುವ ವಿದ್ಯಾರ್ಥಿಗಳಿಗೆ ಮಾತ್ರ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿ ಸಾಲ ಸೌಲಭ್ಯ ನೀಡುವ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರವು ನಿರ್ಧರಿಸಿದೆ.

ಅದರಂತೆ, ಪರಿಷ್ಕೃತ ಆದೇಶ ಹೊರಡಿಸಲು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

### ಸರ್ಕಾರಿ ಆದೇಶ ಸಂಖ್ಯೆ:MWD 51 MDC 2022, ಬೆಂಗಳೂರು, ದಿನಾಂಕ:11-10-2022

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: MWD 51 MDC 2022, ದಿನಾಂಕ:05-07-2022 ನ್ನು ಪರಿಷ್ಕರಿಸಿ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಸಾಲ ಮರುಪಾವತಿ (Loan Recovery amount) ಹಣದಿಂದ NMDFC ಮಾದರಿಯಲ್ಲಿ ವಿದೇಶದಲ್ಲಿ ವ್ಯಾಸಂಗ ಮಾಡಲು ಬಯಸುವ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳಿಗೆ NMDFC ಮಾದರಿಯಲ್ಲಿ 2022-23ನೇ ಸಾಲಿಗೆ ವ್ಯಾಸಂಗ ಸಾಲ ಯೋಜನೆಯನ್ನು ಸಾಲ ಮರುಪಾವತಿಯಿಂದ ಲಭ್ಯವಾಗುವ ಮೊತ್ತದಲ್ಲಿ ಅನುಷ್ಠಾನಗೊಳಿಸಲು ಅನುಬಂಧದಲ್ಲಿ ನಮೂದಿಸಿರುವ ಷರತ್ತಿಗೊಳಪಟ್ಟು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಕ್ತಾರ್ ಪಾಷ ಹೆಚ್.ಜಿ) 11/10/2022
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ.

ಗೆ,

1) ಮಹಾಲೇಖಪಾಲರು (ಅ ಮತ್ತು ಇ), ಕರ್ನಾಟಕ, ಬೆಂಗಳೂರು.
2) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ವಿ.ವಿ.ಗೋಪುರ, ಬೆಂಗಳೂರು.

3) ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ವಸಂತನಗರ, ಬೆಂಗಳೂರು
4) ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು,
5) ಎಲ್ಲಾ ಜಿಲ್ಲೆಯ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
6) ಜಂಟಿ ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ವಸಂತನಗರ, ಬೆಂಗಳೂರು
7) ಜಂಟಿ ನಿರ್ದೇಶಕರು ರಾಜ್ಯ ಹುಜೂರ್ ಖಜಾನೆ ಇಲಾಖೆ, ಬೆಂಗಳೂರು
8) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 3 & 9), ವಿಧಾನ ಸೌಧ, ಬೆಂಗಳೂರು.
9) ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
10) ಸಮನ್ವಯ ಅಧಿಕಾರಿ, ಅಲ್ಪಸಂಖ್ಯಾತರ ಸಹಾಯವಾಣಿ ಕೇಂದ್ರ (24X7) ವಸಂತನಗರ, ಬೆಂಗಳೂರು.
11) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ

CamScanner

ಸರ್ಕಾರಿ ಆದೇಶ ಸಂಖ್ಯೆ:MWD 51 MDC 2022, ದಿನಾಂಕ:11-10-2022ಕ್ಕೆ ಅನುಬಂಧ

ವಿದೇಶ ವ್ಯಾಸಂಗಕ್ಕಾಗಿ ಸಾಲ ಯೋಜನೆ

1. ಯೋಜನೆಯ ಉದ್ದೇಶ:

ವಿದೇಶದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಮಾಡಬಯಸುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಸಾಲ ನೀಡುವ ಉದ್ದೇಶದಿಂದ ಈ ಯೋಜನೆಯನ್ನು ಜಾರಿಗೆ ತರಲಾಗಿದೆ.

ಈ ಕೆಳಕಂಡ ಕೋರ್ಸುಗಳನ್ನು ವಿದೇಶ ಮಟ್ಟದ ವಿಶ್ವವಿದ್ಯಾಲಯ/ ಸಂಸ್ಥೆಗಳಲ್ಲಿ ಅಧ್ಯಯನ ಮಾಡಲು ಅವಕಾಶವಿದೆ.

| Sl.No | Field of Study ಅಧ್ಯಯನದ ಕ್ಷೇತ್ರಗಳು |
|---|---|
| 1 | Engineering |
| 2 | Technical |
| 3 | Science |
| 4 | Management |
| 5 | Business Administration |
| 6 | Medical / Dental |

2. ಅರ್ಹತೆಗಳು:

1. ವಿದ್ಯಾರ್ಥಿಯು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು
2. ವಿದ್ಯಾರ್ಥಿಯು ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದವರಾಗಿರಬೇಕು (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬುದ್ಧಿಸ್ಟ್, ಸಿಖ್ ಮತ್ತು ಪಾರ್ಸಿ ಜನಾಂಗಕ್ಕೆ ಸೇರಿದವರಾಗಿರಬೇಕು)
3. ವಿದ್ಯಾರ್ಥಿಯ ವಯಸ್ಸು 38 ವರ್ಷಕ್ಕಿಂತ ಕಡಿಮೆ ಇರಬೇಕು.
4. ವಿದ್ಯಾರ್ಥಿಯು ಹಿಂದಿನ ವರ್ಷದಲ್ಲಿ ಕನಿಷ್ಠ 60% ಅಂಕವನ್ನು ಪಡೆದಿರಬೇಕು.
5. ವಿದೇಶ ವಿಶ್ವವಿದ್ಯಾಲಯದಿಂದ ಆಫರ್ ಲೇಟರ್ ಪಡೆದಿರಬೇಕು (Top 200 universities listed for women and top 100 universities listed for men)
6. ನಿಗಮಕ್ಕೆ ಆಸ್ತಿಯ (ಕಟ್ಟಡ/ಜಮೀನು) ಅಡಮಾನದ ಮೇಲೆ ಮಾತ್ರ ಸಾಲ ಒದಗಿಸಲಾಗುವುದು. ಆಸ್ತಿಯ ಮೌಲ್ಯವು ಸಾಲದ ಮೊತ್ತಕ್ಕಿಂತ ಕಡಿಮೆ ಇರಬಾರದು.

3. ಸಾಲ ಮಂಜೂರಾತಿ:

ವಿದೇಶದಲ್ಲಿ ಸ್ನಾತಕೋತ್ತರ ಪದವಿ ಮಾಡಲು ಬಯಸುವ ವಿದ್ಯಾರ್ಥಿಗಳಿಗೆ ಅವರು ವಿದ್ಯಾಭ್ಯಾಸ ಪೂರ್ಣಗೊಳಿಸುವವರೆಗೆ ರೂ.10.00 ಲಕ್ಷ ರಿಂದ ರೂ.20.00 ಲಕ್ಷಗಳವರೆಗೆ ಸಾಲವನ್ನು ಈ ಕೆಳಕಂಡಂತೆ ಮಂಜೂರು ಮಾಡಲಾಗುತ್ತದೆ.

(1)ಕುಟುಂಬದ ವಾರ್ಷಿಕ ಆದಾಯ ರೂ.8.00 ಲಕ್ಷ ಇರುವ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ (ಗರಿಷ್ಟ 2 ವರ್ಷ) ರೂ.20.00 ಲಕ್ಷ ಸಾಲವನ್ನು ಶೇ.3 ಬಡ್ಡಿ ದರದಲ್ಲಿ ನೀಡಲಾಗುವುದು.

(2)ಕುಟುಂಬದ ವಾರ್ಷಿಕ ಆದಾಯ ರೂ.8.00 ಲಕ್ಷದಿಂದ ರೂ.15.00 ಲಕ್ಷದವರೆಗೆ ಇರುವ (ಗರಿಷ್ಟ 2 ವರ್ಷ) ರೂ.10.00 ಲಕ್ಷ ಸಾಲವನ್ನು ಶೇ.5ರ ಬಡ್ಡಿದರದಲ್ಲಿ ನೀಡಲಾಗುವುದು.

CamScanner

(3) ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿ ವಿದೇಶ ವ್ಯಾಸಂಗಕ್ಕಾಗಿ ವಿದ್ಯಾರ್ಥಿ ವೇತನ ನೀಡುವ ಸೌಲಭ್ಯವಿದ್ದು, ಸದರಿ ಸೌಲಭ್ಯಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ತಮಗೆ ನಿಗಮದಿಂದ ನೀಡುವ ವಿದೇಶಿ ವ್ಯಾಸಂಗ ಸಾಲ ಅವಶ್ಯಕತೆ ಇದೆಯೆಂದು ತಿಳಿಸಿದ್ದಲ್ಲಿ, ಸದರಿ ವಿದ್ಯಾರ್ಥಿಯ ಅರ್ಜಿಯನ್ನು ವಿದೇಶಿ ಸಾಲ ಸೌಲಭ್ಯಕ್ಕಾಗಿ ಪರಿಗಣಿಸಿ ಆನ್‌ಲೈನ್ ಮೂಲಕ ನಿಗಮಕ್ಕೆ ವರ್ಗಾವಣೆ ಮಾಡಬೇಕು.

4. <u>ಸಾಲದ ಬಿಡುಗಡೆ:</u>

1. ಆಫರ್ ಲೆಟರ್/ವೀಸಾ/ಪಾಸಪೋರ್ಟ್/ಬೋರ್ಡಿಂಗ್ ಪಾಸ್/ಕಾಲೇಜು ಪ್ರಮಾಣ ಪತ್ರ. ಮುಂದಿನ ಸೆಮಿಸ್ಟರ್‌ಗೆ ಅರ್ಹತೆಯನ್ನು ಹೊಂದಿದ ದಾಖಲಾತಿಗಳು ಹಾಗೂ ಸಂಬಂಧಪಟ್ಟ ವಿಶ್ವವಿದ್ಯಾಲಯದಿಂದ ನಿಗಮಕ್ಕೆ ಅಧಿಕೃತ ವಿಶ್ವವಿದ್ಯಾಲಯ/ ಕಾಲೇಜಿನಿಂದ ಇ-ಮೇಲ್ ಬಂದ ನಂತರ ವರ್ಷಕ್ಕೆ ಒಂದು ಕಂತು ಬಿಡುಗಡೆಯಾಗುತ್ತದೆ.

2. ವಿದ್ಯಾರ್ಥಿಯು ಭಾರತದಲ್ಲಿ ಹೊಂದಿರುವ ಬ್ಯಾಂಕ್ ಖಾತೆಗೆ ಸಾಲದ ಮೊತ್ತವನ್ನು ಜಮೆ ಮಾಡಲಾಗುವುದು

5. <u>ಸಾಲದ ಮರುಪಾವತಿ:</u>

1. ಅಧ್ಯಯನದ ಅವಧಿಯಲ್ಲಿ ಸಾಲದ ಮರುಪವಾತಿ ಅಗತ್ಯವಿಲ್ಲ. ವಿದ್ಯಾಭ್ಯಾಸ ಮುಗಿದ 6 ತಿಂಗಳ ನಂತರ ನಿಗದಿಪಡಿಸಿದ ಬಡ್ಡಿ ದರದಲ್ಲಿ 60 ತಿಂಗಳ ಸಮಾನ ಕಂತುಗಳಲ್ಲಿ ಸಾಲವನ್ನು ಮರುಪಾವತಿ ಮಾಡಬೇಕಾಗಿದೆ.

2. ಫಲಾನುಭವಿಯು ನಿಗದಿತ ಕಂತುಗಳಲ್ಲಿ ಸಾಲವನ್ನು ಕಟ್ಟದಿದ್ದರೆ ಶೇ.2 ರಷ್ಟು ದಂಡದ ಬಡ್ಡಿಯನ್ನು (Penal Interest) ವಿಧಿಸಲಾಗುವುದು.

<u>6.ಪರಿಶೀಲನಾ ಸಮಿತಿ:</u>

ವಿದೇಶ ವ್ಯಾಸಂಗಕ್ಕಾಗಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಯು ಎರಡು ವರ್ಷದ ಹೆಚ್ಚು ಅವಧಿಗೆ ಅಂದರೆ ವೈದ್ಯಕೀಯ ಕಾರಣದಿಂದ/ ಪರಿಸ್ಥಿತಿಗಳು ವಿದ್ಯಾರ್ಥಿಗಳ ನಿಯಂತ್ರಣದಲ್ಲಿಲ್ಲ ಕಾರಣ/ ಅಸ್ವಾಭಾವಿಕ ವಿಪತ್ತುಗಳಿಂದ ತನ್ನ ವ್ಯಾಸಂಗ ಒಂದು ವರ್ಷಕ್ಕೆ ಮಾತ್ರ ಮುಂದುವರಿಸಿದರೆ ಅಂತಹ ಅರ್ಜಿಗಳ ವಿಲೇವಾರಿ ಮಾಡಲು ಈ ಕೆಳಕಂಡ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.

| | | |
|---|---|---|
| 1. ವ್ಯವಸ್ಥಾಪಕ ನಿರ್ದೇಶಕರು | - | ಅಧ್ಯಕ್ಷರು |
| 2. ಅಧೀನ ಕಾರ್ಯದರ್ಶಿಗಳು<br>ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ | - | ಸದಸ್ಯರು |
| 3. ಸಹಾಯಕ ನಿರ್ದೇಶಕರು<br>(ವಿದ್ಯಾರ್ಥಿವೇತನ)<br>ಅಲ್ಪಸಂಖ್ಯಾತರ ನಿರ್ದೇಶನಾಲಯ | - | ಸದಸ್ಯರು |
| 4. ಪ್ರಧಾನ ವ್ಯವಸ್ಥಾಪಕರು, ಕ. ಅ. ಅ. ನಿ | - | ಸದಸ್ಯ ಕಾರ್ಯದರ್ಶಿ |

CamScanner

7. <u>ಇತರೆ ಕಡ್ಡಾಯ ನಿಬಂಧನೆಗಳು:</u>

1. ಅಭ್ಯರ್ಥಿಯು ನಿಗಮದ ಎಲ್ಲಾ ಷರತ್ತುಗಳನ್ನು ಒಪ್ಪಿರುವ ಬಗ್ಗೆ ಸ್ವಯಂ ಘೋಷಿತ ಮುಚ್ಚಳಿಕೆಯನ್ನು ನೀಡಬೇಕು.

2. ವಿದೇಶದಲ್ಲಿ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಸಾಲದ ಸೌಲಭ್ಯವನ್ನು ಒಂದು ಕುಟುಂಬದಿಂದ ಒಬ್ಬರಿಗೆ ಮಾತ್ರ ನೀಡಲಾಗುವುದು.

3. ಅಭ್ಯರ್ಥಿಯು ವಿದೇಶಿ ವಿದ್ಯಾಭ್ಯಾಸಕ್ಕಾಗಿ ಉನ್ನತ ವ್ಯಾಸಂಗಕ್ಕೆ ತೆರಳುವ ಪೂರ್ವದಲ್ಲಿ ಭಾರತ ಸರ್ಕಾರದಿಂದ ರಾಯಭಾರಿ ಕಛೇರಿಯ ಮಾರ್ಗಸೂಚಿಗಳನ್ವಯ ನೋಂದಣಿ, ಪೂರ್ವಾನುಮತಿ ಸೇರಿದಂತೆ ಎಲ್ಲಾ ಮಾರ್ಗ ಸೂಚಿಯನ್ನು ಕಟ್ಟುನಿಟಾಗಿ ಪಾಲಿಸುವುದು. ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಮಾರ್ಗಸೂಚಿ ಪಾಲನೆಯಲ್ಲಿ ಎದುರಾಗಬಹುದಾದ ಲೋಪದೋಷಗಳಿಗೆ, ತಪ್ಪು ಮಾಹಿತಿ ನೀಡಿದ್ದಲ್ಲಿ ಅಭ್ಯರ್ಥಿಯು ಹೊಣೆಗಾರರಾಗಿರುತ್ತಾರೆ ಮತ್ತು ಅಂತಹ ವಿದ್ಯಾರ್ಥಿಯ Passport ಮುಟ್ಟುಗೋಲು ಮಾಡಿಕೊಳ್ಳಲಾಗುವುದು ಹಾಗೂ ಸಂಬಂಧಪಟ್ಟ ವಿಶ್ವವಿದ್ಯಾಲಯಕ್ಕೆ ಮಾಹಿತಿಯನ್ನು ನೀಡಲಾಗುವುದು.

4. ವಿದ್ಯಾರ್ಥಿಯು ಮರುಪಾವತಿ ಮಾಡದಿದ್ದಲ್ಲಿ ಕಾನೂನಿನ ಕ್ರಮ ವಹಿಸಲಾಗುವುದು.

(ಮುಕ್ತಾರ್ ಪಾಷ ಹೆಚ್.ಜಿ) 11/10/2021
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ.

CamScanner